## ನನ್ನ ಓದು

ಆ ಗೂಡಿನಲ್ಲಿ ಹಗಲು ರಾತ್ರಿಯ ಗೊಡವೆ ಬಿಟ್ಟು
ಕವಿಯೂ ಕವಯಿತ್ರಿಯೂ
ಕಾವ್ಯದ ಬೇಟೆಯಲ್ಲಿ
ಬೇಟದ ಕಾವಿನಲ್ಲಿ
ಮುಳುಗೇಳತೊಡಗಿದರು

.....

ಅವನ ಕವಿತೆಯನ್ನು ಇವಳೂ
ಇವಳ ಕವಿತೆಯನ್ನು ಅವನೂ
ಓದುತ್ತ ತಿದ್ದುತ್ತ ಕಣ್ಣರಳಿಸುತ್ತ
ಅಂಥ ಹೊಟ್ಟೆಕಿಚ್ಚಿರದೆ ಬೆಳೆಯುತ್ತ ಬೆಳೆಸುತ್ತ
ಅವರವರು ಕವಿಯಾಗಿ ಬೆಳೆದರು.

.....

ಅವಳ ತಾಜಾ ಪ್ರತಿಮೆಗಳ ಹೊಳಪಿಗೆ ಅವನಿಗೆ ವಿಸ್ಮಯ
ಅವನ ಸಹಜ ಪ್ರತಿಭೆಯ ಎದುರು ಅವಳ ಸಹಜ ವಿನಯ

ಕಾವ್ಯವೇ, ಕಲೆಯ ಪ್ರಕಾರವೇ ಸಂಬಂಧವೊಂದನ್ನು ಕೈ ಹಿಡಿದು ನಡೆಸಿದ, ಅರಳಿಸಿದ ಅಪರೂಪದ ಸಂಬಂಧಗಳಲ್ಲಿ ಇದೊಂದು. ಅವನಂಥ ಮೇಷ್ಟ್ರು ಮತ್ತೊಬ್ಬನಿಲ್ಲ, ಅಪ್ಪನಂತೆ ನನ್ನನ್ನು ಕಾಪಾಡುವವನು ಎಂದೆಲ್ಲ ಅನ್ನಿಸಿದ್ದು, ಅನುಭವಿಸಿದ್ದು ಬಲಿಯಾದದ್ದು, ಹೆಣ್ಣಿನ ಅಸೂಯೆಗೆ ಎನ್ನುತ್ತಾರೆ ನಟರಾಜ್. ಅದು ಅಸೂಯೆ ಮಾತ್ರವಾಗಿತ್ತೆ? ಸ್ಪರ್ಧೆಯನ್ನು ಕೇವಲ ಅಸೂಯೆ ಎಂದು ಮಾತ್ರ ಕರೆದು ಬಿಡಬಹುದೆ? ಒಪ್ಪುವುದು ಕಷ್ಟ. ಯಾಮಾರಿಸಿರಬಹುದು ಇವರನ್ನೂ ಒಳಗೆಲ್ಲೊ ಹೆಡೆಯಾಡಿಸಿರುವ ಪುರುಷಾಹಂಕಾರ. ಅವಳ ಅನುಮಾನ ಆರಂಭದಲ್ಲಿ, ಮತ್ತೆ ಕೆಲವರ ವಿಷಯದಲ್ಲಿ ಅಕಾರಣವಿದ್ದೀತು. ಉತ್ಪ್ರೇಕ್ಷೆಯಿದ್ದೀತು. ಮುಂದೊಂದು ದಿನ ನಿಜವೇ ಆಯಿತಲ್ಲ. ದಾಂಪತ್ಯದಲ್ಲಿ ನಿಷ್ಠೆ ಎನ್ನುವುದು ಹೆಣ್ಣಿಗೆ ಆದಿಮ ಕರಾರಾದರೆ ಗಂಡಿಗೆ ಯಾಕಾಗಿ ಅದು ಆಯ್ಕೆ, ಸಾಧಿತವಾಗಿಬಿಟ್ಟರೆ ಕಿರೀಟವಾಗಬೇಕು? ಇಷ್ಟಕ್ಕೂ ಸಿಲ್ವಿಯಾಗೆ ಅಲ್ಲಿ ರಾಜಿಗೋ ತಾಳ್ಮೆಗೋ ಅವಕಾಶವಿತ್ತೆ? ಇರಲಿಲ್ಲವೆಂದಾದ ಮೇಲೆ, ಆಮೇಲೆ ಆಸಿಯಾಳ ಜೊತೆ ಅವನ ಖರೆ ಸಂಬಂಧವೇ ಬೆಳೆದಾದ ಮೇಲೆ ಉಳಿದದ್ದೇನು? ಜಾಣ ಕುರುಡು, ಅನಿವಾರ್ಯ ಹೊಂದಾಣಿಕೆಯ ಪ್ರಶ್ನೆ ಸಿಲ್ವಿಯಾಳ ಜಾಯಮಾನವೇ ಅಲ್ಲ.

ಅವಳ ಅನುದಿನದ ಅನುಮಾನಗಣ್ಣಿಗೆ ಕೆರಳಿ ನರಳಿದ್ದ
ಕವಿಗೆ ಆ ಅನುಮಾನ ಸಾಕಾರ ಮಾಡಲು
ಇದೀಗ ಮೈಚಳಿ ಬಿಟ್ಟು ಹೊರಡುವ
ನಿಗೂಢ ಕರೆ ಹುಟ್ಟಿ ಎತ್ತಲೋ ಕರೆದೊಯ್ದಂತಿತ್ತು

ಅಬಬ್ಬಬ್ಬಾ ಎನಿಸುತ್ತದೆ, ಇದನ್ನು ಓದುತ್ತಿದ್ದರೆ, ಮತ್ತದೇ ತರತಮದ, ಇಲ್ಲದ ಅಹಂಕಾರ ಮತ್ತು ಅಧಿಕಾರದ ಪ್ರಯೋಗ, ವಕಾಲತ್ತು. ಪಾಂಡುವಿಗಾದರೆ ಅದು, 'ವಸಂತ ನೃಪಾಲ ನಡೆದನು ಪಾಂಡುವಿನ ಮೇಲೆ', ಮಾದ್ರಿಗಾದರೆ, 'ಕಾಮ ವಿಕಾರ'. ಅವಳದಲ್ಲದ ತಪ್ಪಿಗೆ ಅವಳು